# ಬಹುಶ್ರುತ ವಿದುಷಿ



ಹಿಂದೂಸ್ತಾನಿ ಸಂಗೀತ ಕಿರಾಣಾ ಘರಾಣೆಯ ಖ್ಯಾಲ್ ಶೈಲಿಯಲ್ಲಿ ಈಗಾಗಲೇ ಭದ್ರವಾಗಿ ನೆಲೆಯೂರಿರುವ ವಿದುಷಿ ಶಶಿಕಲಾ ಗುರವ ಕುಲಹಳ್ಳಿ, ಮಧುರವಾದ ಸಂಗೀತದ ವಿವಿಧ ಪ್ರಕಾರಗಳಲ್ಲೂ ಕೈಯಾಡಿಸಿ ಸೈ ಎನಿಸಿಕೊಂಡಿದ್ದಾರೆ.

■ ಉಮಾ ಅನಂತ್

ಅದು ಗಾನಯೋಗಿ ಪಂ. ಪಂಚಾಕ್ಷರ ಗವಾಯಿಗಳ ಸ್ಮರಣೆಯ ಸಂಗೀತೋತ್ಸವ. ಹಿಂದೂಸ್ತಾನಿ ಗಾಯಕಿ ಶಶಿಕಲಾ ಕುಲಹಳ್ಳಿ ವೇದಿಕೆ ಏರಿ ಶ್ರುತಿ ಮಾಡಿದ ತಂಬೂರಿಯನ್ನು ಹಿತವಾಗಿ ಮೀಟಲಾರಂಭಿಸಿದರು. ಅಲ್ಲಿ ನೆರೆದಿದ್ದ ಸಾವಿರಾರು ಸಂಗೀತಾಸಕ್ತರು ಕುತೂಹಲದಿಂದ ಕಿವಿಯಾನಿಸುತ್ತಿದ್ದಂತೆ ಈ ಗಾಯಕಿ ರಾಗ 'ಗೌಡ ಮಲ್ಹಾರ್' (ಮಲ್ಹಾರ್ ಥಾಟ್) ಗೆ ಆಲಾಪ ಶುರು ಮಾಡಿದರು. ಆ ಸುಮಧುರ ಆಲಾಪ ಮುಗಿಸಿ ರಾಗ ವಿಸ್ತರಿಸುತ್ತಾ ತಾನ್‌ಗಳ ಸ್ವರಮಾಲೆ ಪೋಣಿಸಿದರು. ಸ್ವರತಾನ್, ಆಕಾರ್ ತಾನ್‌ಗಳು ವೇಗ ಪಡೆದುಕೊಂಡು ಸ್ಥಾಯಿ ತಾರಕಕ್ಕೇರಿ ಗಾಯಕಿ ಭಾವಪರವಶಳಾದಂತೆ ಈಕೆಯ ಕಂಠ ಕೇಳುಗರನ್ನು ಕಟ್ಟಿಹಾಕಿತು. ಒಂದು ರಾಗವನ್ನು ಸುಮಾರು 45 ನಿಮಿಷ ಹಾಡಿದ ಬಳಿಕ ಶಶಿಕಲಾ ಮರಾಠಿ ಗೀತೆ ಆಯ್ದರು. ಅದಾಗಿ ಠುಮ್ರಿ, ವಚನ ಸಂಗೀತ.. ಹೀಗೆ ಸಂಗೀತದ ವೈವಿಧ್ಯಮಯ ಪ್ರಕಾರಗಳನ್ನು ಲೀಲಾಜಾಲವಾಗಿ ಹಾಡಿದರು. ಅಂದು ಹಾಡಿದ ಒಂದೇ ಕಛೇರಿಯಿಂದ ಅವರ ಅದೃಷ್ಟ ಖುಲಾಯಿಸಿತು. ಒಂದಾದ ಮೇಲೆ ಒಂದು ಸಂಗೀತ ಕಛೇರಿಗೆ ಅವಕಾಶ ತಾನಾಗಿ ಒಲಿದು ಬಂತು. ಇದು ನಡೆದದ್ದು ಹುಬ್ಬಳ್ಳಿಯಲ್ಲಿ; 1997 ಇಸವಿ ಜನವರಿ 3ರಂದು.

ಅಲ್ಲಿಂದ ಇಲ್ಲಿಯವರೆಗೆ ವಿದುಷಿ ಶಶಿಕಲಾ ದೇಶ ವಿದೇಶಗಳಲ್ಲಿ ನೀಡಿದ ಕಛೇರಿ ಸಾವಿರಾರು. ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಖ್ಯಾಲ್ ಗಾಯನ ಪ್ರಕಾರದ ಜತೆಗೆ ಸುಗಮ ಸಂಗೀತ, ಜಾನಪದ ಸಂಗೀತ, ವಚನ ಸಂಗೀತ, ಕನ್ನಡ ರಂಗ ಗೀತೆಗಳು, ಹಿಂದಿ ಮತ್ತು ಮರಾಠಿ ಸುಗಮ ಸಂಗೀತ, ವಚನ ಸಂಗೀತ, ಟಪ್ಪಾ ಠುಮ್ರಿ, ಗಜಲ್ ಗಾಯನವನ್ನೂ ಅಷ್ಟೇ ಸಲೀಸಾಗಿ, ಮಾಧುರ್ಯಪೂರ್ಣವಾಗಿ ಹಾಡುತ್ತಾರೆ ಶಶಿಕಲಾ. ಒಬ್ಬ ಗಾಯಕಿ ಸಂಗೀತದ ಇಷ್ಟೊಂದು ಪ್ರಕಾರಗಳಲ್ಲಿ ಸಾಧನೆ ಮಾಡುವುದು ವಿರಳವೇ ಎನ್ನಬಹುದು.

ಶಶಿಕಲಾ ಶ್ರೀಕಾಂತ ಕುಲಹಳ್ಳಿ ಆಕಾಶವಾಣಿ ಹಾಗೂ ದೂರದರ್ಶನದ ಎ ದರ್ಜೆ ಗಾಯಕಿ. ಕಿರಾಣಾ ಘರಾಣೆಯ ಖ್ಯಾತ ಗಾಯಕ ಪಂ ಸಂಗಮೇಶ್ವರ ಗುರವ ಅವರ ಪುತ್ರಿ. ತಂದೆಯಿಂದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಲಿತರು. ಕಿರಾಣಾ ಘರಾಣೆಯಲ್ಲಿ ಛಾಪು ಮೂಡಿಸಲು ಸಂಗೀತ ಕ್ಷೇತ್ರದಲ್ಲಿ ಸದ್ಯ ಮೇಲ್ಪಂಕ್ತಿಯಲ್ಲಿ ನಿಲ್ಲುವ ಪಂ. ಕೈವಲ್ಯಕುಮಾರ ಗುರವ ಅವರ ಪ್ರಭಾವವೂ ಇವರ ಮೇಲಿದೆ. ಸಂಗೀತದಲ್ಲಿ ಶಶಿಕಲಾ ಉತ್ತಮ ಕಲಾವಿದೆಯಾಗಿ ರೂಪುಗೊಳ್ಳಲು ಇದೂ ಒಂದು ಕಾರಣ.

ವಿಜಾಪುರದವರಾದ ಶಶಿಕಲಾ ಓದಿದ್ದು ಕೂಡ ಶಾಸ್ತ್ರೀಯ ಸಂಗೀತದಲ್ಲಿ ಸ್ನಾತಕೋತ್ತರ ಪದವಿಯೇ. ಈಗಾಗಲೇ ದೆಹಲಿ, ಪುಣೆ, ಮುಂಬೈ, ಹೈದರಾಬಾದ್, ತಿರುಪತಿ, ಭೋಪಾಲ, ಲಖನೌ, ತಂಜಾವೂರು, ಗೋವಾ, ಬೆಂಗಳೂರು, ಮೈಸೂರು ದಸರಾ, ಹಂಪಿ ಉತ್ಸವ, ಕದಂಬೋತ್ಸವ ಮುಂತಾದ ಕಡೆಗಳಲ್ಲಿ ಸಂಗೀತ ಕಛೇರಿ ಕೊಟ್ಟಿದ್ದಾರೆ. ದೆಹಲಿ ದೂರದರ್ಶನ ಪ್ರಸಾರ ಮಾಡಿದ 'ಮೇರಿ ಆವಾಜ್ ಸುನೋ' ಕಾರ್ಯಕ್ರಮದಲ್ಲಿಯೂ ಭಾಗವಹಿಸಿ ಗಮನಸೆಳೆದಿದ್ದಾರೆ. 'ಲಡ್ಡು ಮುತ್ಯಾ' ಎಂಬ ಕನ್ನಡ ಚಲನಚಿತ್ರದಲ್ಲಿಯೂ ಅಭಿನಯಿಸಿದ್ದಾರೆ. 'ಕೆಚ್ಚೆದೆಯ ಗಂಡು' ಚಲನಚಿತ್ರಕ್ಕೆ ಹಿನ್ನೆಲೆ ಗಾಯನ ಇವರದೇ.

## ಬಹುಶ್ರುತ ವಿದುಷಿ

ಶಾಸ್ತ್ರೀಯ ಸಂಗೀತದ ಬಹುಶ್ರುತ ವಿದುಷಿಯಾಗಿರುವ ಶಶಿಕಲಾ ಅವರಿಗೆ ಅನೇಕ ಪ್ರಶಸ್ತಿಗಳು ಬಂದಿವೆ. ಹುಬ್ಬಳ್ಳಿ–ಧಾರವಾಡ ಮಹಾನಗರ ಸಭೆಯ ರಾಜ್ಯೋತ್ಸವ ಪ್ರಶಸ್ತಿ, ಸವದತ್ತಿ ಪ್ರಶಸ್ತಿ , ವಿಜಾಪುರದ ಸಿದ್ಧೇಶ್ವರ ಸಂಸ್ಥೆ ಪ್ರಶಸ್ತಿ, ಕರ್ನಾಟಕ ಯುವ ಪ್ರಶಸ್ತಿ, ವಿಜಾಪುರ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸರ್ಕಾರದ ಕ್ರೀಡಾ ಇಲಾಖೆ ಉದಯೋನ್ಮುಖ ಕಲಾವಿದರಿಗೆ ನೀಡುವ ರಾಜ್ಯ ಪ್ರಶಸ್ತಿ ಪ್ರಮುಖವಾದವು.

ಇವರು ಹಾಡಿದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಸೀಡಿ ಸಂಗೀತ ಕ್ಷೇತ್ರದಲ್ಲಿ ಜನಪ್ರಿಯವಾಗಿದೆ. ಸದ್ಯ ಶಶಿಕಲಾ ನಾನಾ ವೇದಿಕೆಗಳಲ್ಲಿ ಸಂಗೀತ ಕಛೇರಿ ಕೊಡುವುದರ ಜತೆಗೆ ವಿಜಾಪುರ ಮತ್ತು ಬೆಂಗಳೂರಿನ ಮಲ್ಲೇಶ್ವರಂನಲ್ಲಿ ನೂರಾರು ಮಕ್ಕಳಿಗೆ ಸಂಗೀತ ಪಾಠ ಹೇಳಿಕೊಡುತ್ತಾರೆ. ■